**ಓ ಎಸ್ ನಂಃ 226/2021**

**ಪಿ ಡಬ್ಲ್ಯೂ ಃ 1**

**ದಿಃ 21.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ವಿ ವಕೀಲರಿಂದ :-**

ನಾನು ಪ್ರಸ್ತುತ ಬಾಗಲಗುಂಟೆ ಗ್ರಾಮದಲ್ಲಿ ವಾಸವಾಗಿದ್ದೇನೆ. ಈ ಹಿಂದೆ ನಾನು ಬೆಂಗಳೂರಿನ ವಿಜಯನಗರದಲ್ಲಿ ವಾಸವಾಗಿದ್ದೆ. ಈ ದಾವೆಯ ಪ್ರತಿವಾದಿಯು ತಮಗೆ ಹೇಗೆ ಪರಿಚಯ ಎಂದರೆ ಅವರು ನಮ್ಮ ವಿಜಯನಗರದ ಮನೆಯಲ್ಲಿ ಬಾಡಿಗೆಗೆ ಇದ್ದರು. ಪ್ರತಿವಾದಿಯು 1988 – 1989 ನೇ ಸಾಲಿನಲ್ಲಿ ನಮ್ಮ ಮನೆಯ ಬಾಡಿಗೆಯಲ್ಲಿ ಇದ್ದರು. ದಿಃ 20.02.1992 ರಲ್ಲಿ ತಾವು ಪ್ರತಿವಾದಿಗೆ ಒಂದು ನೋಟಿಸ್ ನ್ನು ಜಾರಿ ಮಾಡಿದ್ದೀರಿ ಎಂದರೆ ಸರಿ. ಸದರಿ ನೋಟಿಸ್ ನ ಪ್ರತಿ ತಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ನಮ್ಮ ವಕೀಲರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ನೋಟಿಸ್ ನ್ನು ತಾವು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಮತ್ತು ಸದರಿ ನೋಟಿಸ್ ತಾವು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ. ನಾನು ಪ್ರತಿವಾದಿಗೆ ದಿಃ 20.02.1992 ರಂದು ವಕೀಲರ ಮುಖಾಂತರ ನೋಟಿಸ್ ನ್ನು ಜಾರಿ ಮಾಡಿರುತ್ತೇನೆ. ತಾವು ಪ್ರತಿವಾದಿಗೆ ನೀಡಿರುವ ನೋಟಿಸ್ ಗೆ, ಪ್ರತಿವಾದಿಯು ಜವಾಬು ನೋಟಿಸ್ ನೀಡಿದ್ದಾರ ಎಂದರೆ ಸಾಕ್ಷಿಯು ನಾನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಕುರುಬರಹಳ್ಳಿ ಗ್ರಾಮದ ಸರ್ವೆ ನಂ. 38/3 1 ಎಕರೆ 27 ಗುಂಟೆಗೆ ತಮ್ಮ ಮತ್ತು ಈ ದಾವೆಯ ಪ್ರತಿವಾದಿಯ ನಡುವೆ ದಿಃ 10.07.1989 ರಲ್ಲಿ ಭೋಗ್ಯ ಪತ್ರ ಆಗಿತ್ತು, ಸದರಿ ವಿಚಾರವಾಗಿ ದಿಃ 20.02.1992 ರಂದು ಪ್ರತಿವಾದಿಗೆ ನೋಟಿಸ್ ನ್ನು ಜಾರಿ ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಸಾಕ್ಷ್ಯ ನುಡಿಯುತ್ತಾರೆ. ದಿಃ 10.07.1989 ರ ಭೋಗ್ಯದ ಕರಾರು ಪತ್ರ ತಮ್ಮ ಬಳಿ ಇದೆಯಾ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಭೋಗ್ಯದ ಕರಾರು ಪತ್ರವನ್ನು ಹಾಜರುಪಡಿಸಬಲ್ಲೆ. ಭೋಗ್ಯ ಪತ್ರದ ಆಧಾರದ ಮೇಲೆ ಕುರುಬರಹಳ್ಳಿ ಗ್ರಾಮದ ಸರ್ವೆ ನಂ.38/3 ರ ವಿಸ್ತೀರ್ಣ 1 ಎಕರೆ 27 ಗುಂಟೆ ಜಮೀನಿಗೆ ಪ್ರತಿವಾದಿಯು ಸ್ವಾಧೀನಾನುಭವಕ್ಕೆ ಬಂದಿದೆ ಎಂದರೆ ಸರಿ. ತಾವು ಭೋಗ್ಯ ಪತ್ರ ಆಧಾರದ ಮೇಲೆ ಮೇಲ್ಕಂಡ ಸ್ವತ್ತನ್ನು ಪ್ರತಿವಾದಿಗೆ ಹಸ್ತಾಂತರಿಸಿದಾಗ ಸದರಿ ಸ್ವತ್ತು ಖಾಲಿ ಜಮೀನು ಆಗಿತ್ತು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಇಟ್ಟಿಗೆಯನ್ನು ತಯಾರು ಮಾಡಲು 3 ಶೆಡ್ ಗಳು ಇವೆ. ಪ್ರತಿವಾದಿಯು ಸರ್ವೆ ನಂ. 38/3 ರ ವಿಸ್ತೀರ್ಣ 1 ಎಕರೆ 27 ಗುಂಟೆ ಜಮೀನಿನಲ್ಲಿ

**ಓ ಎಸ್ ನಂಃ 226/2021**

**ಪಿ ಡಬ್ಲ್ಯೂ ಃ 1**

ಇಟ್ಟಿಗೆಯನ್ನು ತಯಾರು ಮಾಡಲು ಕಾರ್ಖಾನೆ ಯನ್ನು ಸ್ಥಾಪನೆ ಮಾಡಿರುತ್ತಾರೆ ಎಂದರೆ ಸರಿ. ಮೇಲ್ಕಂಡ ಸ್ವತ್ತಿನಲ್ಲಿ **30 x 120** ಅಡಿಯ ವಿಸ್ತೀರ್ಣದ 3 ಶೆಡ್ ಗಳು ಇವೆ. ಸದರಿ ಜಮೀನಿನಲ್ಲಿ 20 ಮಾವಿನ ಮರ ಮತ್ತು ಸದರಿ ಜಮೀನಿಗೆ ಮುಳ್ಳು ಬೇಲಿಯನ್ನು ಹಾಕಿದ್ದೀರಿ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**